

ಹಿಂದೆಂದೋ ಈ ತೊಟ್ಟಿಲ ಕುರಿತು ತಿಳಿದವರು, ಇಂದು ತಮ್ಮ ಮಗಳಿಗೋ ಅಥವಾ ಮೊಮ್ಮಕ್ಕಳಿಗೋ ಇದನ್ನು ಉಡುಗೊರೆಯಾಗಿ ನೀಡಲು ಈ ಕಲಾವಿದರ ಮನೆಯನ್ನು ಹುಡುಕಿಕೊಂಡು ಬರುತ್ತಾರೆ. ಆದರೆ, ತಕ್ಷಣಕ್ಕೆ ಇಲ್ಲಿ ತೊಟ್ಟಿಲು ದೊರೆಯುವುದಿಲ್ಲ. ಆರ್ಡರ್ ನೀಡಿದ ನಂತರ, ಕನಿಷ್ಠ ಒಂದು ತಿಂಗಳಾದರೂ ಕಾಯಲೇಬೇಕು.

‘ಒಂದು ಕಾಲದಲ್ಲಿ ₹4.5, ₹12ಕ್ಕೆ ತೊಟ್ಟಿಲು ನೀಡಿದ ಉದಾಹರಣೆಗಳಿವೆ. ಆದರೆ ಬಣ್ಣ ತಯಾರಿಕೆ, ಪರಿಶ್ರಮ ಇತ್ಯಾದಿಗಳನ್ನು ನೋಡಿದರೆ ಈಗ ಇಟ್ಟಿರುವ ಶುಲ್ಕವೂ ಕಡಿಮೆಯೇ. ಹೀಗಾಗಿಯೇ ಹಲವು ಕಲಾವಿದರು ಈ ವೃತ್ತಿಯನ್ನೇ ತ್ಯಜಿಸಿದರು. ಇನ್ನೂ ಕೆಲವರು ಹಿಸ್ಸೆಯಾದ ನಂತರ ಬಡತನ ನೀಗಿಸಲು ಹಣ ಬರುವ ವೃತ್ತಿಗಳ ಕಡೆ ಮುಖ ಮಾಡಿದರು. ಇಂದು ₹300, ₹500ಕ್ಕೆ ತೊಟ್ಟಿಲು ಸಿಗುತ್ತದೆ. ಹೀಗಾಗಿ ₹20 ಸಾವಿರ ರೂಪಾಯಿಯ ತೊಟ್ಟಿಲು ಖರೀದಿಸುವವರ ಸಂಖ್ಯೆ ಕ್ಷೀಣಿಸುತ್ತಿದೆ. ನಾವು ಅಣ್ಣ ತಮ್ಮಂದಿರು ಸೇರಿಕೊಂಡು ಈ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ’ ಎಂದ ಲಕ್ಷ್ಮಣ ಸಾವುಕಾರ ಅವರ ಮಾತುಗಳಲ್ಲಿ ವಿಷಾದದ ಎಳೆಯಿತ್ತು.

ಕಲಘಟಗಿ ತೊಟ್ಟಿಲು ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರ ಭಾಗದಲ್ಲಿ ಹೆಚ್ಚು ಪ್ರಚಲಿತ. ಕೆಲವು ದಶಕಗಳ ಹಿಂದೆ ಜಿಲ್ಲೆಯಲ್ಲಿದ್ದ ಐಪಿಎಸ್ ಅಧಿಕಾರಿ ಜ್ಯೋತಿಪ್ರಕಾಶ ಮಿರ್ಜಿ ಅವರು ಇಲ್ಲಿಂದ ತೊಟ್ಟಿಲನ್ನು ಮಾಡಿಸಿಕೊಂಡು ಹೋಗಿದ್ದರು. ನಂತರ ಇದೇ ಮಾದರಿಯಲ್ಲಿ ದಿವಾನ್ ಮಂಚವನ್ನು ಮಾಡಿಕೊಡುವಂತೆ ಹೇಳಿದರು. ಆಗುವುದಿಲ್ಲ ಎಂದರೂ ಮಾಡಲೇಬೇಕು ಎಂದು ಅವರೇ ಮಾರ್ಗದರ್ಶನ ಮಾಡಿದರು. ಇವರ ಮನೆಯಲ್ಲಿದ್ದ ಈ ಕಲಾಕೃತಿಗಳನ್ನು ನೋಡಿದ ಮತ್ತೊಬ್ಬ ಅಧಿಕಾರಿ ಕೆಂಪಯ್ಯ ತಮ್ಮ ಮನೆಗೆ ಸೋಫಾ, ಟೀಪಾಯಿ ಮಾಡಿಸಿಕೊಂಡರು.

ಒಮ್ಮೆ ಕೆಂಪಯ್ಯ ಅವರ ಮನೆಗೆ ವರನಟ ರಾಜಕುಮಾರ್ ಅವರು ಹೋಗಿದ್ದಾಗ ಈ ಕಲಾಕೃತಿಯುಳ್ಳ ಸೋಫಾ ಕಂಡು, ‘ನಾನು ಕೆಳಗೇ ಕುಳಿತು ಇದರ ಅಂದವನ್ನು ಕಣ್ತುಂಬಿಕೊಳ್ಳುತ್ತೇನೆ. ಇದರ ಮೇಲೆ ಕೂರಲು ಮನಸ್ಸು ಬರುತ್ತಿಲ್ಲ’ ಎಂದಿದ್ದರಂತೆ. ಅದೇ ಸಂದರ್ಭದಲ್ಲಿ ತಮ್ಮ ಮಗಳಿಗಾಗಿ ತೊಟ್ಟಿಲೊಂದನ್ನು ಬಯಸಿದರಂತೆ. ಅವರ ಮನೆಗೆ ಹೋಗಿ ತೊಟ್ಟಿಲು ಕೊಟ್ಟು ಬಂದಿದ್ದು ಇಂದಿಗೂ ನೆನಪಿದೆ ಎಂದೆನ್ನುತ್ತಾರೆ ಲಕ್ಷ್ಮಣ.

ಮತ್ತೊಬ್ಬ ಕಲಾವಿದ ಮಾರುತಿ ಬಡಿಗೇರ ಅವರು ಮಾಡಿದ ತೊಟ್ಟಿಲನ್ನು ಪಾರ್ವತಮ್ಮ ರಾಜಕುಮಾರ್ ಅವರ ತಂಗಿಯವರು ತಮ್ಮ ಮೊಮ್ಮಗಳಿಗಾಗಿ ಖರೀದಿಸಿದ್ದಾರೆ. ಆ ತೊಟ್ಟಿಲು ಅಮೆರಿಕಕ್ಕೆ ಹಾರಿದೆ.

## ಹೊರರಾಜ್ಯಗಳಿಂದ ಬೇಡಿಕೆ ಹೆಚ್ಚು

ಕಲಘಟಗಿ ತೊಟ್ಟಿಲಿಗೆ ಹೊರರಾಜ್ಯಗಳಲ್ಲಿ ಹೆಚ್ಚಿನ ಬೇಡಿಕೆಯಿದೆ. ಬೆಂಗಳೂರು, ಮಂಗಳೂರು, ಮಹಾರಾಷ್ಟ್ರದ ಮುಂಬೈ, ಪುಣೆ, ಸಾಂಗ್ಲಿ, ಕೊಲ್ಹಾಪುರದ ಹಲವರು ಇಂದಿಗೂ ಕಲಘಟಗಿ ತೊಟ್ಟಿಲಿಗಾಗಿ ಹಂಬಲಿಸುತ್ತಾರೆ. ಅಮೆರಿಕ, ಆಸ್ಟ್ರೇಲಿಯಾ, ಬಹರೆನ್‌ನಲ್ಲಿ ನೆಲೆಸಿರುವವರೂ ಇಲ್ಲಿಗೆ ಬಂದು ತೊಟ್ಟಿಲು ಖರೀದಿಸಿ ತೆಗೆದುಕೊಂಡು ಹೋಗುತ್ತಾರೆ. ಮಕ್ಕಳು ದೊಡ್ಡವರಾಗುತ್ತಿದ್ದಂತೆ ಈ ತೊಟ್ಟಿಲುಗಳು ಕಲಾಕೃತಿಯ ರೂಪದಲ್ಲಿ ಮನೆಯಲ್ಲಿ ಅಲಂಕಾರಕ್ಕೆ ಬಳಕೆಯಾಗುತ್ತವೆ.

ದಾಂಡೇಲಿ ಅರಣ್ಯದಲ್ಲಿ ಬೆಳೆಯುವ ವಿಶ್ವದ ಉತ್ಕೃಷ್ಟ ಮಟ್ಟದ ತೇಗದಿಂದ ಈ ತೊಟ್ಟಿಲುಗಳು ಸಿದ್ಧಗೊಳ್ಳುವುದರಿಂದ ಗಟ್ಟಿಮುಟ್ಟಾಗಿರುತ್ತವೆ. ಇದೇ ಕಾರಣಕ್ಕಾಗಿಯೇ ಕಲಘಟಗಿ ತೊಟ್ಟಿಲಿಗೆ ಹೆಚ್ಚಿನ ಬೇಡಿಕೆ. ಅಲ್ಲದೇ ಅವುಗಳ ಮೇಲೆ ವಿಭಿನ್ನ ಬಗೆಯ ಚಿತ್ರ ಬಿಡಿಸುವ ದೇಸಿ ಕಲೆ ಕೂಡ ತೊಟ್ಟಿಲುಗಳ ಮೆರುಗು ಹೆಚ್ಚಿಸುತ್ತದೆ. ತಾಳಿಕೆ, ಬಾಳಿಕೆ ಮತ್ತು ಕುಶಲತೆಯೇ ಪ್ರಧಾನವಾಗಿದ್ದರಿಂದ ಇಂದಿಗೂ ಕಲಘಟಗಿ ತೊಟ್ಟಿಲಿನ ಕಲೆಗೆ ದೇಶವಿದೇಶಗಳಲ್ಲೂ ಭಾರೀ ಮನ್ನಣೆ ಸಿಗುತ್ತಿದೆ.

ಮಾರುತಿ ಬಡಿಗೇರ ಅವರು ಸಿದ್ಧಪಡಿಸಿದ ತೊಟ್ಟಿಲನ್ನು ಕೇರಳದ ನಲ್ಲೂರು ಅರಮನೆಗೆ ತೆಗೆದುಕೊಂಡು ಹೋಗಲಾಗಿದೆ. ‘ನಾಗವಲ್ಲಿ’ ಎಂಬ ತಮಿಳು ಚಿತ್ರ ನಿರ್ಮಾಣದಲ್ಲಿ ದೈತ್ಯ ಕುಸುರಿ ಕೆಲಸವಿರುವ ಕಲಘಟಗಿ ತೊಟ್ಟಿಲೇ ಬೇಕು ಎಂದು ನಿರ್ದೇಶಕರು ಪಡೆದು, ತಮ್ಮ ಚಿತ್ರದಲ್ಲಿ ಬಳಸಿದ್ದಾರೆ.

## ತೊಟ್ಟಿಲು ಖರೀದಿಯ ಪೂಜೆ

ಮಗಳು ಗರ್ಭಿಣಿ ಎಂದು ತಿಳಿಯುತ್ತಿದ್ದಂತೆ ಪೋಷಕರು ಕಲಘಟಗಿಗೆಗೆ ದೌಡಾಯಿಸಿ ಮುಂಗಡ ಹಣಕೊಟ್ಟು ತೊಟ್ಟಿಲಿಗೆ ಬೇಡಿಕೆ ಸಲ್ಲಿಸುತ್ತಾರೆ. ಹೀಗೆ ಒಬ್ಬರಿಗೆ ಸಿದ್ಧಗೊಂಡ ತೊಟ್ಟಿಲನ್ನು ಬೇರೆಯವರಿಗೆ ನೀಡುವ ಪದ್ಧತಿ ಇಲ್ಲಿ ಇಲ್ಲ. ಹಾಗೆಯೇ ತೊಟ್ಟಿಲನ್ನು ತೆಗೆದುಕೊಂಡು ಹೋಗುವಾಗಲೂ ರೀತಿ ರಿವಾಜನ್ನು ಇವರು ಮೀರುವುದಿಲ್ಲ.

ತೊಟ್ಟಿಲು ಖರೀದಿ ಸಂದರ್ಭದಲ್ಲಿ ಕಾಯಿ, ಹಣ್ಣು, ಅರಿಶಿಣ, ಕುಂಕುಮ, ಊದುಬತ್ತಿ ಮತ್ತು ಚುರುಮುರಿ ಪೂಜಾ ಸಾಮಗ್ರಿಗಳನ್ನು ತರಬೇಕು. ತಂದಿದ್ದನ್ನು ಇಲ್ಲಿ ಐದು ಭಾಗವಾಗಿಟ್ಟು, ಐದು ಜನ ಪೂಜೆ ಸಲ್ಲಿಸುತ್ತಾರೆ. ಪೂಜೆ ಸಲ್ಲಿಸಿದ ನಂತರ ಮಕ್ಕಳಿಗೆ ಮೊದಲು ಪ್ರಸಾದ ನೀಡಿ, ನಂತರ ದೊಡ್ಡವರು ಪಡೆಯುತ್ತಾರೆ. ದಕ್ಷಿಣೆ ನೀಡಿ ತೊಟ್ಟಿಲು ತೆಗೆದುಕೊಂಡು ಹೋಗುವುದು ವಾಡಿಕೆ.

‘ಸುಧಾ’ ತಂಡ ಕಲಘಟಗಿಗೆ ಭೇಟಿ ನೀಡಿದಾಗ ಕಲಾವಿದ ಶ್ರೀಕಾಂತ ಸಾವುಕಾರ ಅವರು ತಮಗೆ ಕಾಲೇಜಿನಲ್ಲಿ ವಿದ್ಯೆ ಕಲಿಸಿದ ಗುರುಗಳಾದ ಡಿ.ಆರ್. ಸೂಳಿಭಾವಿ ಅವರ ಮಗಳಿಗೆ ಸಿದ್ಧಪಡಿಸಿದ ತೊಟ್ಟಿಲನ್ನು ಶಾಸ್ತ್ರೋಕ್ತವಾಗಿ ಹಸ್ತಾಂತರಿಸಿದರು. ಯಾರೇ ತೊಟ್ಟಿಲು ಖರೀದಿಸಿದರೂ ಅವರಿಗೆ ಒಳ್ಳೆಯದಾಗಬೇಕು ಎಂಬುದು ನಮ್ಮ ಆಶಯ. ಹಿರಿಯರಿಂದಲೂ ಬಂದ ಈ ಸಂಪ್ರದಾಯವನ್ನು ಕಲೆಯಂತೆಯೇ ಜತನದಿಂದ ಕಾಪಾಡಿಕೊಂಡು ಹೋಗಲಾಗುತ್ತಿದೆ ಎಂದು ಶ್ರೀಕಾಂತ ಹೇಳಿದರು.

ತೊಟ್ಟಿಲಿಗೆ ಬೇಡಿಕೆ ಕಡಿಮೆಯಾಗುತ್ತಿರುವುದರಿಂದ ಕಲಾವಿದರು ಇತರ ಕೆಲಸಗಳತ್ತಲೂ ಮುಖಮಾಡಿದ್ದಾರೆ. ಗ್ರಾಮ ದೇವತೆಯರಿಗೆ ಬಣ್ಣ ಹಚ್ಚುವುದು, ಲೋಕೋಪಯೋಗಿ ಇಲಾಖೆಗೆ ಫಲಕ ಬರೆಯುವುದು, ಮಣ್ಣೆತ್ತಿನ ಅಮವಾಸ್ಯೆಗೆ ಬಸವನನ್ನು ಸಿದ್ಧಪಡಿಸುವುದು, ನಾಗರಪಂಚಮಿಗೆ ನಾಗನನ್ನು ರಚಿಸುವುದು, ಗಣೇಶ ಚತುರ್ಥಿಗೆ ಗಣಪತಿ ಮೂರ್ತಿ ಮಾಡುವುದು, ಮೊಹರಂಗೆ ಹುಲಿ ಬಣ್ಣ ಹಚ್ಚುವುದು ಇತ್ಯಾದಿಗಳನ್ನು ಉಪಜೀವನಕ್ಕಾಗಿ ಕಲಾವಿದರು ನೆಚ್ಚಿಕೊಂಡಿದ್ದಾರೆ. ಅದು ಇವರಿಗೆ ಅನಿವಾರ್ಯವೂ ಆಗಿದೆ.

## ಅರಗಿನ ಲಭ್ಯತೆ ಸಮಸ್ಯೆ

ಅರಗು ಮತ್ತು ರಾಳವನ್ನು 75:25ರ ಅನುಪಾತದಲ್ಲಿ ಬೆರೆಸಿ, ಅದಕ್ಕೆ ಬಣ್ಣದ ಪುಡಿ ಮಿಶ್ರಮಾಡಿ ಒಂದು ಹದದ ಶಾಖದಲ್ಲಿ ಬೇಯಿಸಲಾಗುತ್ತದೆ. ಅದು ನಂತರ ಕಲ್ಲಾಗುತ್ತದೆ. ಹೀಗೆ ಕಲ್ಲಾಗುವ ಮೊದಲು ವಿವಿಧ ಬಣ್ಣಗಳ ಕಡ್ಡಿಗಳನ್ನು ಸಿದ್ಧಪಡಿಸಿಕೊಳ್ಳಲಾಗುತ್ತದೆ. ಒಂದು ಕೈಯಲ್ಲಿ ಇಂಥ ಕಡ್ಡಿ ಹಿಡಿದು, ಅದನ್ನು ಬೆಂಕಿಯಲ್ಲಿ ಕಾಯಿಸುತ್ತಲೇ ತೊಟ್ಟಿಲಿಗೆ ಸಿದ್ಧಗೊಂಡ ಮರದ ತುಂಡಿಗೆ ಅಂಟಿಸುತ್ತಾ ಕೇದಿಗೆ ಎಲೆಯಲ್ಲಿ ಚಿತ್ರಗಳನ್ನು ರಚಿಸಲಾಗುತ್ತದೆ. ನಂತರ ಮನೆಯಲ್ಲಿ ಸಿದ್ಧಪಡಿಸಿದ ಎಣ್ಣೆ ಲೇಪಿಸಿ ಕಲಾಕೃತಿ ದೀರ್ಘಕಾಲ ಮೂಡುವಂತೆ ಮಾಡಲಾಗುತ್ತದೆ.

‘ಅರಗು ಸಿಗುವುದೇ ಇಂದು ಕಷ್ಟವಾಗಿದೆ. ಕೆಲವೆಡೆ ಕಪ್ಪು ಅರಗು ಸಿಗುತ್ತದೆ. ಅದು ಇಡೀ ಬಣ್ಣವನ್ನೇ ಹಾಳು ಮಾಡುತ್ತಿದೆ. ಸದ್ಯ ಬೆಳಗಾವಿಯಿಂದ ತರಿಸುತ್ತಿದ್ದೇವೆ. ಇದನ್ನು ಸಿದ್ಧಪಡಿಸಲು ಹಗಲುರಾತ್ರಿ ನಿದ್ದೆಗೆಡಬೇಕು. ಒಮ್ಮೆ ಹಚ್ಚಿದರೆ 500 ವರ್ಷಗಳಾದರೂ ತೊಟ್ಟಿಲ ಬಣ್ಣ ಮಾಸದು. ಆದರೆ ಈ ಬಣ್ಣವನ್ನು ಗೋಲಾಕಾರದ ಮರದ ಮೇಲೆ ಹಾಕಲಾಗುತ್ತದೆಯೇ ಹೊರತು, ಸಮತಟ್ಟಾದ ವಸ್ತುವಿನ ಮೇಲೆ ಹಾಕಲಾಗದು. ನಾಲ್ಕು ತಲೆಮಾರಿನ ಹಿಂದಿನ ತೊಟ್ಟಿಲುಗಳಲ್ಲಿ ಕೆಲವು ಈಗ ಮರು ಬಣ್ಣ ಹಚ್ಚಲು ಬಂದಿವೆ. ನಿರ್ವಹಣೆ ಇಲ್ಲದ ಕಾರಣದಿಂದ ಅವು ಮಂಕಾಗಿರುತ್ತವೆಯೇ ಹೊರತು, ಬಣ್ಣ ಮಾಸಿರುವುದಿಲ್ಲ’ ಎಂದು ಮಾರುತಿ ಬಡಿಗೇರ ತಿಳಿಸಿದರು.